Q: 1363

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಸರ್ಕಾರ ಕೃಷಿ ಪ್ರಶಸ್ತಿ ಯೋಜನೆ ಜಾರಿಗೆ ತಂದಿದೆಯೇ?
ಆ) ಇದನ್ನು ಜಾರಿಗೆ ತರುವ ಉದ್ದೇಶವೇನು?
ಇ) ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಪ್ರಶಸ್ತಿ ನೀಡಲಾಗುತ್ತಿರುವ ಮೊತ್ತವೆಷ್ಟು ; ಇದುವರೆವಿಗೂ ಪ್ರಶಸ್ತಿ ನೀಡಲಾಗಿರುವ ಜನರ ಸಂಖ್ಯೆ ಎಷ್ಟು? (ವಿವರ ನೀಡುವುದು)
ಈ) ಮಾಗಡಿ ತಾಲ್ಲೂಕಿನಲ್ಲಿ ಈ ಕೃಷಿ ಪ್ರಶಸ್ತಿ ಪಡೆದವರ್ಯಾರು ಹಾಗೂ ಹಣದ ಮೊತ್ತವೆಷ್ಟು? (ವಿವರ ನೀಡುವುದು)

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಇಲ್ಲ, ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಆ) ಈ ಯೋಜನೆಯ ಉದ್ದೇಶವೇನೆಂದರೆ , ವಿವಿಧ ಮಟ್ಟಗಳಲ್ಲಿ ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಿ ಈ ಮೂಲಕ ಆರಿಸಿದ ಬೆಳೆಗಳ ಪ್ರತಿ ಹೆಕ್ಟೇರಿನ ಇಳುವರಿಯನ್ನು ಹೆಚ್ಚಿಸುವುದು.
ಇ) ಉದ್ಭವಿಸುವುದಿಲ್ಲ, ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಈ) ಉದ್ಭವಿಸುವುದಿಲ್ಲ.

ವಿಷಯ : ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು.

Q: 1452

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ, ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ಗ್ರಾಮವನ್ನು ಆರಿಸಿ ಮಾದರಿ ಗ್ರಾಮವಾಗಿ ಎಲ್ಲಾ ದೃಷ್ಟಿಯಿಂದಲೂ ಅಭಿವೃದ್ಧಿ ಪಡಿಸುವ ಯೋಜನೆಯನ್ನು 1991-92ನೇ ಸಾಲಿನಿಂದ ಅನುಷ್ಠಾನಕ್ಕೆ ತರಬೇಕೆಂದು ಯೋಜಿಸಲಾಗಿತ್ತು. ಆದರೆ ಯೋಜನಾ ಆಯೋಗದ ಆದೇಶದ ಮೇರೆಗೆ ಸದರಿ ಯೋಜನೆಯನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಆದ ಕಾರಣ ಈ ಯೋಜನೆಗೆ ಇದುವರೆಗೂ ಯಾವ ಹಳ್ಳಿಯನ್ನೂ ಆಯ್ಕೆ ಮಾಡಿರುವುದಿಲ್ಲ.